ಭರ್ತಿ ಮಾಡಬೇಕು. ಅಂತೆಯೇ ಅವರು ಇರತಕ್ಕಂತಹ ಸ್ಥಳ ಒಂದಾದರೆ, ವಾಸ ಮಾಡುವುದು ಬೇರೊಂದು ಕಡೆಯಲ್ಲಿ. ಸಮಯದಲ್ಲಿ ಅವರು ಸಿಗುವುದಿಲ್ಲ. ಅವರ ಮನೆಕಡೆಗಳಲ್ಲಿ ಐದಾರು ಗ್ರಾಮಗಳ ಜನರು ಇರುತ್ತಾರೆ. ಬಹುಶಃ ನಿಮ್ಮ ಮನೆಗೂ ಅಷ್ಟು ಜನರು ಬರಲಿಕ್ಕಿಲ್ಲವೆಂದು ಕಾಣುತ್ತದೆ. ದಯವಿಟ್ಟು ಈ ಭರ್ತಿ ಕ್ರಮವನ್ನು ಮಾಡಿ ಮತ್ತು ಅವರುಗಳ ವಸತಿ ಬಗ್ಗೆ ಯೋಚನೆ ಮಾಡಿ.

ಶ್ರೀ ಎಸ್. ಆರ್. ಬೊಮ್ಮಾಯಿ.—ಮಾನ್ಯ ಸದಸ್ಯರು ಹೇಳತಕ್ಕಂಥದ್ದರಲ್ಲಿ ಸತ್ಯಾಂಶವಿದೆ. ನಿಯಮಗಳ ತಿದ್ದುಪಡಿ ಮಾಡಿದ್ದೇವೆ. ಆದಷ್ಟು ಜಾಗ್ರತೆ ಈ ಜಾಗಗಳನ್ನು ಭರ್ತಿ ಮಾಡಲು ವ್ಯವಸ್ಥೆ ಮಾಡುತ್ತೇನೆ.

ಶಿಕಾರಿಪುರ ತಾಲ್ಲೂಕಿನ ತಾಳಗುಂದ ಹೋಬಳಿಯಲ್ಲಿ ಗ್ರಾಮ ಲೆಕ್ಕಾಧಿಕಾರಿಗಳ ಸಂಖ್ಯಾಬಲ

೬೧೬. ಶ್ರೀ ಬಿ.ಎಸ್. ಯಡಿಯೂರಪ್ಪ (ಶಿಕಾರಿಪುರ).—ಮಾನ್ಯ ಕಂದಾಯ ಮಂತ್ರಿಗಳು ಈ ವಿಷಯವನ್ನು ದಯವಿಟ್ಟು ತಿಳಿಸುವರೆ?

೧. ಶಿಕಾರಿಪುರದ ತಾಲ್ಲೂಕ್ ತಾಳಗುಂದ ಹೋಬಳಿಯಲ್ಲಿ ಇರಬೇಕಾದ ಗ್ರಾಮಲೆಕ್ಕಾಧಿಕಾರಿಗಳ ಸಂಖ್ಯೆ ಎಷ್ಟು? ಈಗ ಹಾಲಿ ಇರುವ ಸಂಖ್ಯೆ ಎಷ್ಟು?

ಶ್ರೀ ಎಸ್.ಆರ್. ಬೊಮ್ಮಾಯಿ (ಕಂದಾಯ ಮಂತ್ರಿಗಳು).—

೧. ಶಿಕಾರಿಪುರ ತಾಲ್ಲೂಕ್ ತಾಳಗುಂದ ಹೋಬಳಿಯಲ್ಲಿ ಇರಬೇಕಾದ ಗ್ರಾಮ ಲೆಕ್ಕಾಧಿಕಾರಿಗಳ ಸಂಖ್ಯೆ ೨೧. ಹಾಗೂ ಹಾಲಿ ಇರುವ ಸಂಖ್ಯೆ ೭,

ಶ್ರೀ ಬಿ.ಎಸ್. ಯಡಿಯೂರಪ್ಪ.—ಮಾನ್ಯ ಅಧ್ಯಕ್ಷರೇ.....

ಶ್ರೀ ಎಸ್. ಆರ್. ಬೊಮ್ಮಾಯಿ.—ಮಾನ್ಯ ಅಧ್ಯಕ್ಷರೇ ನಾನು ಈಗಾಗಲೇ ಮಾನ್ಯ ಸದಸ್ಯರ ಪ್ರಶ್ನೆಗೆ ಉತ್ತರ ಕೊಡುತ್ತಾ ಹೇಳಿದೆ, ಈಗಿರತಕ್ಕಂಥ ನಿಯಮಗಳನ್ನು ತಿದ್ದುಪಡಿ ಮಾಡುತ್ತಿದ್ದೇವೆ. ಆ ಕೆಲಸ ಮುಂಗಿದ ತಕ್ಷಣ ಆದಷ್ಟು ಬೇಗ ಆಯ್ಕೆ ಮಾಡಿ ಕ್ರಮ ತೆಗೆದುಕೊಳ್ಳುತ್ತೇವೆ.

ಶ್ರೀ ಬಿ.ಎಸ್. ಯಡಿಯೂರಪ್ಪ.—ಮಾನ್ಯ ಅಧ್ಯಕ್ಷರೇ, ಹಳ್ಳಿಗಳಲ್ಲಿ ಡಾಕ್ಟರ್ಸ್ ಇಲ್ಲ. ಗ್ರಾಮ ಲೆಕ್ಕಿಗರು ಇಲ್ಲ. ಯಾವ ರೀತಿಯಲ್ಲಿ ನಾವು ಕೆಲಸ ಮಾಡಬೇಕು. ಮಾನ್ಯ ಮಂತ್ರಿಗಳು ಕೊಟ್ಟ ಉತ್ತರದ ಪ್ರಕಾರ ೨೧ ಜನ ಗ್ರಾಮಲೆಕ್ಕಿಗರಲ್ಲಿ ೭ ಜನ ಮಾತ್ರ ಇದ್ದಾರೆಂದು ತಿಳಿಸಿದ್ದಾರೆ. ಇವರಲ್ಲಿ ೫೦ ಪರ್ಸೆಂಟ್ ಆಗಿರುವವರು ಮತ್ತು ಏನಾದರೂ ಚಾರ್ಜ್ಸ್ ಇದ್ದ ಆಮಾನತ್ತಿನಲ್ಲಿರುವವರೇ ಜಾಸ್ತಿ. ಇವರ ಫೈಲ್‌ಗಳನ್ನು ತಾವು ತರಿಸಿ ನೋಡಿ ಆದಷ್ಟು ಬೇಗ ಯಾವುದಾದರೊಂದು ಕ್ರಮತೆಗೆದುಕೊಳ್ಳಿ. ನಾವು ಜಿಲ್ಲಾಧಿಕಾರಿಗಳನ್ನು ಕೇಳಿದರೆ ಅವರು ಹೇಳುತ್ತಾರೆ ಅಂತಹ ಪ್ರಾಮಾಣಿಕರು ಯಾರು ಇದ್ದಾರೆ ಎಂದು. ನಾವು ಯಾರಾದರೂ ಹೆಸರುಗಳನ್ನು ಕೊಟ್ಟರೆ ಅವರನ್ನಾದರೂ ಅಲ್ಲಿ ಹಾಕುವಂತಹ ವ್ಯವಸ್ಥೆ ಮಾಡಿದರೆ ಒಳ್ಳೆಯದು.

ಶ್ರೀ ಎಸ್.ಆರ್. ಬೊಮ್ಮಾಯಿ.—ಮಾನ್ಯ ಅಧ್ಯಕ್ಷರೇ ಮಾನ್ಯ ಸದಸ್ಯರು ಒಳ್ಳೆಯ ಸಲಹೆಯನ್ನು ಕೊಟ್ಟಿದ್ದಾರೆ. ಆದಷ್ಟು ಬೇಗ ಮಾಡೋಣ.

ಅಧ್ಯಕ್ಷರು.—ಪ್ರಶ್ನೆ ಸಂಖ್ಯೆ ೪೫೦ (೮೧೮) ಸದಸ್ಯರು ಗೈರುಹಾಜರಿ.

ಪರಿಹಾರ ಮಂಜೂರಾತಿ

೧೦೮೯. ಶ್ರೀ ಎನ್. ಗಂಗಾಧರ (ಶ್ರವಣಬೆಳಗೊಳ).—ಮಾನ್ಯ ವಿದ್ಯುಚ್ಛಕ್ತಿ ಗಣಿ ಹಾಗೂ ಭೂವಿಜ್ಞಾನ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವುವರೆ?

ಅ) ಶ್ರವಣಬೆಳಗೊಳ ಕ್ಷೇತ್ರದಲ್ಲಿ ೨೨೦ ಕೆ.ವಿ. ವಿದ್ಯುಚ್ಛಕ್ತಿ ಲೈನು ಎಳೆಯುತ್ತಿರುವ ಭೂಮಿ ಯಲ್ಲಿರುವ ತೆಂಗಿನ ಮರಗಳನ್ನು ತೆಗೆಯುವುದಕ್ಕೆ ಕೊಡುವ ಪರಿಹಾರವನ್ನು ಗೊತ್ತುಪಡಿಸಿ ಎಷ್ಟು ವರ್ಷವಾಯಿತು.

ಆ) ಪರಿಹಾರ ಈಗಿನ ಪರಿಸ್ಥಿತಿಗನುಗುಣವಾಗಿ ಕೊಡಲಾಗುವುದೆ?

ಶ್ರೀ ಜೆ. ಎಸ್. ದೇಶಮುಖ್ (ವಿದ್ಯುತ್, ಗಣಿ ಮತ್ತು ಭೂವಿಜ್ಞಾನ ಮಂತ್ರಿಗಳು).—

ಅ) ಪರಿಹಾರ ಕೊಡುವ ದರವನ್ನು ೧೯೭೭ನೇ ಇಸವಿಯಲ್ಲಿ ನಿಗದಿಮಾಡಲಾಯಿತು.

ಆ) ಹಾಲಿ ಅಧಿಕೃತವಾಗಿ ನಿಗದಿ ಮಾಡಿರು ದರದಂತೆ ಪರಿಹಾರ ಧನವನ್ನು ಕೊಡಲಾಗುತ್ತೆ. ಎಲ್ಲಿ ನಿಗದಿ ಮಾಡಿರುವ ಪರಿಹಾರ ಧನವನ್ನು ಒಪ್ಪುತ್ತಿಲ್ಲವೊ ಅಲ್ಲಿ ಪ್ರತಿಯೊಂದು ಪ್ರಕರಣವನ್ನು ಅದರ ಅರ್ಹತೆ ಮತ್ತು ಪುನರ್ವಿಮರ್ಶೆಗೆ ಇರುವ ಕಾರಣಗಳನ್ನು ಗಮನಿಸಿ ತೀರ್ಮಾನ ತೆಗೆದು ಕೊಳ್ಳಲಾಗುವುದು.

ಶ್ರೀ ಎನ್. ಗಂಗಾಧರ್.—ಮಾನ್ಯ ಅಧ್ಯಕ್ಷರೇ ೧೯೭೭ರಲ್ಲಿ ನಿಗಧಿ ಮಾಡಿದ್ದೇವೆಂದು ಮಾನ್ಯ ಮಂತ್ರಿಗಳು ಹೇಳಿದರು. ೧೯೭೭ನೇ ಇಸವಿಯಲ್ಲಿ ತೆಂಗಿನ ಕಾಯಿಯ ಬೆಲೆ ೧೦೦ಕ್ಕೆ ೫೦೦–೬೦೦ ರೂಪಾಯಿಗಳು ಇತ್ತು. ಆದರೆ ಇವತ್ತು ೧೦೦ ತೆಂಗಿನ ಕಾಯಿಯ ಬೆಲೆ ೩೦೦೦–೪೦೦೦ ರೂಪಾಯಿಗಳು ಆಗಿದೆ. ತೆಂಗಿನ ಮರದ ಆಯಸ್ಸು ೧೦೦ ವರ್ಷಗಳು. ಈ ಮರದಲ್ಲಿ ಸುಮಾರು ೨೦–೩೦ ಸಾವಿರ ರೂಪಾಯಿಗಳು ಬರುತ್ತದೆ. ಈ ಬಗ್ಗೆ ಕೋರ್ಟಿಗೆ ಹೋದರೆ ವಕೀಲರಿಗೆ ಲಾಭವಾಗುತ್ತದೆ. ಆದ್ದರಿಂದ ಈ ಬಗ್ಗೆ ಸರ್ಕಾರದವರು ಗಮನಕೊಟ್ಟು ಸೂಕ್ತ ರೀತಿಯ ಬೆಲೆಯನ್ನು ಕೊಡಬೇಕೆಂದು ಕೇಳಿಕೊಳ್ಳುತ್ತೇನೆ.

ಶ್ರೀ ಜೆ. ಎಸ್. ದೇಶಮುಖ್.—ಮಾನ್ಯ ಅಧ್ಯಕ್ಷರೇ ನಾನು ಈಗಾಗಲೇ ಹೇಳಿರುವಂತೆ ೮–೧೦ ವಯಸ್ಸಾಗಿರುವ ತೆಂಗಿನ ಮರಗಳಿಗೆ ೩೫೫ ರೂಪಾಯಿಗಳು. ೫–೬ ವರ್ಷ ವಯಸ್ಸಾಗಿರುವ ತೆಂಗಿನ ಮರಗಳಿಗೆ ೩೦೦ ರೂಪಾಯಿಗಳು. ಬರೀ ೫ ವರ್ಷದ ತೆಂಗಿನ ಮರಕ್ಕೆ ೧೦೦೦ ರೂಪಾಯಿಗಳನ್ನು ಕೊಡುತ್ತಿದ್ದೇವೆ, ಮಾನ್ಯ ಸದಸ್ಯರು ಇನ್ನೂ ಹೆಚ್ಚಿನ ಪರಿಹಾರ ಕೊಡಬೇಕೆಂದು ಕೇಳುತ್ತಿದ್ದಾರೆ. ಆ ಬಗ್ಗೆ ಪರಿಶೀಲನೆ ಮಾಡೋಣ.

ಅಭಾವ ಕಾಮಗಾರಿಗಳು ಮಂತ್ರು ಬಂಡವಾಳಗಳು

೧೦೩೦. ಶ್ರೀ ಕೆ. ಬಿ. ಕೋಳಿವಾಡ (ರಾಣೆಬೆನ್ನೂರು) ಮಾನ್ಯ ಕಂದಾಯ ಹಾಗೂ ಯೋಜನ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯೆಯಿಟ್ಟು ಉತ್ತರಿಸುವರೆ?

ಅ) ಅಭಾವ ಪರಿಹಾರಕ್ಕಾಗಿ ರಾಣೆಬೆನ್ನೂರು ತಾಲ್ಲೂಕಿಗೆ ಬಿಡುಗಡೆ ಮಾಡಿದ ಹಣವೆಷ್ಟು? (ಇಲಾಖಾವಾರು ಮಾಹಿತಿ ಒದಗಿಸುವುದು)

ಆ) ಧಾರವಾಡ ಜಿಲ್ಲೆಯ ಪ್ರತಿ ತಾಲ್ಲೂಕಿಗೆ ಬಿಡುಗಡೆ ಮಾಡಿದ ಹಣವೆಷ್ಟು?

ಇ) ಧಾರವಾಡ ಜಿಲ್ಲೆಯ ಪ್ರತಿ ತಾಲ್ಲೂಕುಗಳಲ್ಲಿ ಅಭಾವಕ್ಕೊಳಗಾದ ಒಟ್ಟು ಹಳ್ಳಿಗಳೆಷ್ಟು?

ಈ) ಅಭಾವ ಪರಿಹಾರ ಕಾಮಗಾರಿಗಳ ಮೇಲ್ವಿಚಾರಣೆ ಬಗ್ಗೆ ತೆಗೆದುಕೊಂಡ ಕ್ರಮಗಳೇನು?

ಶ್ರೀ ಎಸ್.ಆರ್. ಬೊಮ್ಮಾಯಿ (ಕಂದಾಯ ಮಂತ್ರಿಗಳು ಉತ್ತರಿಸುವರು).—

ಅ) ಇಲಾಖಾವಾರು ಒಟ್ಟು ರಾಣೇಬೆನ್ನೂರು ತಾಲ್ಲೂಕಿಗೆ ಈ ಕೆಳಕಂಡಂತೆ ಅಭಾವ ಪರಿಹಾರಕ್ಕಾಗಿ ಹಣ ಬಿಡುಗಡೆ ಮಾಡಲಾಗಿದೆ.

೧)	ಕ್ಷೇತ್ರಾಭಿವೃದ್ಧಿ ಅಧಿಕಾರಿ	೧.೭೫ ಲಕ್ಷ
೨)	ಲೋಕೋಪಯೋಗಿ	೨.೭೫ ,,
೩)	ಸಣ್ಣ ನೀರಾವರಿ (ಎಂ.ಐ)	೨.೧೫ ,,
೪)	ಕೃಷಿ ಅಧಿಕಾರಿ (ಭೂಸಾರ ಸಂರಕ್ಷಣೆ)	೦.೬೬ ,,
೫)	ವಲಯ ಅರಣ್ಯಾಧಿಕ್ಷಾರಿ	೦.೬೦ ,,
	ಒಟ್ಟು	೭.೯೧